# ನಾಗಾರಾಧನೆ

**ರಾಮಚಂದ್ರ**
**ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ**
**ಭಂಡಾರ್ಕರ್ಸ್ ಕಲಾ ಮತ್ತು ವಿಜ್ಞಾನ ಕಾಲೇಜು,**
**ಕುಂದಾಪುರ –೫೭೬೨೦೧**
**ಉಡುಪಿ ಜಿಲ್ಲೆ, ಕರ್ನಾಟಕ, ಭಾರತ**

ಕರಾವಳಿ ಕರ್ನಾಟಕದ ಎರಡು ಭಾಷಾ ಪ್ರದೇಶಗಳಾದ ತುಳು ಹಾಗೂ ಕನ್ನಡ ಪ್ರದೇಶಗಳೆರಡರಲ್ಲೂ ನಾಗ ಬಹು ಜನಪ್ರಿಯ ಆರಾಧ್ಯ ದೈವ. ನಾಗಾರಾಧನೆಯ ಬಹಳ ಮುಖ್ಯವಾದ ಧಾರ್ಮಿಕ ಸಾಂಸ್ಕೃತಿಕ ಆಚರಣೆಯಾಗಿದ್ದು, ಭೂತಾರಾಧನೆಗಿಂತ ಪ್ರಾಚೀನವಾದುದೆಂಬ ಅಭಿಪ್ರಾಯಗಳಿವೆ. ಭಯ ಮತ್ತು ಸೌಂದರ್ಯಗಳು ಸಮ್ಮಿಲನಗೊಂಡ ನಾಗನನ್ನು ಕಂಡಾಗ ಜನರು ಮೊತ್ತ ಮೊದಲು ಅದಕ್ಕೆ ತಲೆಬಾಗಿ ಆರಾಧಿಸ ತೊಡಗಿರಬಹುದು. ಕಾಲಾಂತರದಲ್ಲಿ ಸುಂದರವಾದ, ಕಲಾತ್ಮಕವಾದ ನಾಗನ ಕಲ್ಲುಗಳನ್ನು ಕೆತ್ತಿಸಿ ನಾಗನಿಗಾಗಿಯೇ ದೊಡ್ಡ ಮರ, ಬಳ್ಳಿಗಳ ಸ್ವಲ್ಪ ಪ್ರದೇಶವನ್ನು ಮೀಸಲಿರಿಸಿ ಅಲ್ಲಿ ನಾಗನ ಕಲ್ಲುಗಳನ್ನಿರಿಸಿ ನಾಗಬನವೆಂದು ಹೆಸರಿಸಿ, ಆರಾಧನೆ ನಡೆಸಿಕೊಂಡು ಬರುವ ಕ್ರಮ ಮೊದಲಿದ್ದಿರಬೇಕು. ಈ ತುಳುನಾಡಿಗೆ ಬ್ರಾಹ್ಮಣರು ಬಂದು ದೇವಸ್ಥಾನಗಳಲ್ಲಿ ಮಂತ್ರ ಉಚ್ಚಾರಣೆಗಳೊಡನೆ ಆರಾಧಿಸುವ ಸಂಪ್ರದಾಯ ಮೊದಲಾಗಿರಬೇಕು. ತುಳುನಾಡಿನಲ್ಲಿ ಬ್ರಾಹ್ಮಣರು ಬರುವ ಮೊದಲೇ ನಾಗಾರಾಧನೆ ವ್ಯಾಪಕವಾಗಿ ನಡೆಯುತ್ತಿದ್ದರಿಂದ ಈ ಭೂಭಾಗಕ್ಕೆ ಬಹಳ ಹಿಂದೆಯೇ 'ನಾಗರ ಖಂಡ' ಎಂಬ ಹೆಸರು ಬಂದಿರಬೇಕು.

"ನಾಗ" ಎಂದರೆ ನಾಗರಹಾವು, ಸರ್ಪ ಎಂಬ ಅರ್ಥ ಕೊಡುತ್ತದೆ. ಹಾವನ್ನು ದೇವರ ರೂಪದಲ್ಲಿ ಚಿತ್ರೀಕರಿಸಿ, ಕಲ್ಪಿಸಿಕೊಂಡು, ಅವಾಹನೆ ಮಾಡಿಕೊಂಡು, ಸ್ವಾಮಿ ಕೋಲ, ಸ್ವಾಮಿ ಆರಾಧನೆ, ಕಾಡ್ಯ ನಾಟ್ಯ, ನೋಂಪು (ಅನಂತ ವೃತ) ತನು ಹಾಕುವುದು, ನಾಗ ಮಂಡಲ, ಆಶ್ಲೇಷ ಬಲಿ, ಸರ್ಪಂಕೋಲ, ಢಕ್ಕೆಬಲಿ, ನಾಗಮಂಡಲ ಮುಂತಾದ ರೂಪದಲ್ಲಿ ಆರಾಧಿಸುತ್ತಿರುವುದನ್ನು ನಾಗಾರಾಧನೆ ಎಂದು ಕರೆಯಬಹುದು. ಭಕ್ತಾದಿಗಳು ತಮ್ಮ ಸಂಕಷ್ಟ ಪರಿಹಾರಕ್ಕಾಗಿ, ಬೇನೆ, ಆಕಸ್ಮಿಕ ಅವಗಡ, ಪುತ್ರ ಸಂತಾನ, ಕೌಟುಂಬಿಕ ಶ್ರೇಯೋಭಿವೃದ್ಧಿಗಾಗಿ ಸಂಬಂಧಪಟ್ಟ ದೈವದೇವರುಗಳನ್ನು ಸಂಪ್ರೀತರನ್ನಾಗಿಸಲು ಗೀತ ನೃತ್ಯಗಳೊಂದಿಗೆ ಕುಣಿದು ನಮ್ರವಾಗಿ ಬೇಡುತ್ತಾರೆ. ಇಂತಹ ಆಕಸ್ಮಿಕಗಳಿಗೆ ಕಾರಣ ಕರ್ತೃಗಳಾದ ದೇವರನ್ನು ತಾವು ಬಳಿಸಿಕೊಳ್ಳದೇ ಹೋದರೆ ಹೆಚ್ಚಿನ ಅಪಾಯ ಬಂದಿತೆಂಬ ಭಯವು ಇದೆ. ಇಂತಹ ಆರಾಧನೆಗಳಿಗೆ ಕೋಲ, ನೇಮ, ತಂಬಿಲ, ಢಕ್ಕೆಬಲಿ, ನಾಗಾರಾಧನೆ ಎಂದು ಕರೆಯುತ್ತಾರೆ.

**ನಾಗಾರಾಧನೆಯ ಪ್ರಾಚೀನತೆ:**

- ನಾಗಾರಾಧನೆ ಪ್ರಪಂಚದ ಅತ್ಯಂತ ಪ್ರಾಚೀನ ಆರಾಧನೆ ಸಂಪ್ರದಾಯಗಳಲ್ಲಿ ಒಂದು. ಇದು ಯಾವ ಕಾಲದಲ್ಲಿ ಪ್ರಾರಂಭವಾಯಿತು ಹಾಗೂ ಯಾವ ಪ್ರದೇಶದಲ್ಲಿ ಮೊದಲು ಪ್ರಾರಂಭವಾಯಿತು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.
- ಕ್ರಿ.ಪೂ. ೨೬೦೦ ವರ್ಷಗಳ ಹಿಂದೆಯೇ **ಸುಮೇರಿಯನ್** ದೊರೆ 'ಗುದಿಯನ'ನ ಸುರಾ ಪಾತ್ರೆಯಲ್ಲಿ ಮೇಲೆ ನಾಗ ಮಿಥುನದ ಸ್ವಾರಸ್ಯವಾದ ಚಿತ್ರಣದಿಂದಲೇ ನಾಗ ಸಂಬಂಧ ಸಂಪ್ರದಾಯದ ಪ್ರಾಚೀನತೆಯನ್ನು ತಿಳಿಯಬಹುದು.
- **ಗ್ರೀಕರ** ರಾಷ್ಟ್ರ ಚಿಹ್ನೆ ಸರ್ಪ. ಅಲ್ಲಿ ಆರೋಗ್ಯದ ಅಧಿದೇವತೆಯಾದ 'ರುಸ್ಕು ಲೇಪಿಯನ್' ಕೈಯಲ್ಲಿ ಹಿಡಿದಿರುವ ದಂಡದ ಸುತ್ತ ನಾಗ ಮಿಥುನವಿದೆ. ನಂತರ ಇದೆ ಚಿಹ್ನೆಯನ್ನು ವೈದ್ಯ ವಿಜ್ಞಾನದ ಲಾಂಛನವನ್ನಾಗಿ ಮಾಡಿಕೊಳ್ಳಲಾಗಿದೆ. ಗ್ರೀಸಿನ ವೀರರು ಸತ್ತ ಮೇಲೆ ಸರ್ಪಗಳಾಗಿ ಜನಿಸುತ್ತಾರೆ ಎಂಬ ನಂಬಿಕೆ ಅಪಾರವಾಗಿದೆ.
- **ಕ್ರೇಟ್** ರಾಜ್ಯದಲ್ಲಿ ಸರ್ಪನಿಗೆ ಹಾಲು ಕೊಟ್ಟು ಪೂಜಿಸುವ ಸಂಪ್ರದಾಯವಿದೆ.

- **ಎಥೆನ್ಸ್** ನಗರದಲ್ಲಿ ಸರ್ಪ ದೇವಾಲಯಗಳಿದ್ದ ಬಗ್ಗೆ ಇತಿಹಾಸವಿದೆ. ಸರ್ಪಗಳು ದೇವತೆಗಳಿಗೆ ಸಂದೇಶ ರವಾನಿಸುವವರಾಗಿರುವರು ಎಂದು ಅವರ ನಂಬಿಕೆ.
- **ಬ್ರಿಟನ್ನಿನಲ್ಲಿ** ಡ್ರೂಯಿಕ್ ಜನರು ಸರ್ಪ ಆರಾಧಿತರಾಗಿದ್ದರೆಂದು ಅಲ್ಲಿಯ ಜನಪದರ ಮೌಖಿಕ ನಂಬಿಕೆ.
- **ಬ್ಯಾಬಿಲೋನಿಯಾ** ಸಂಸ್ಕೃತಿಯಲ್ಲಿ ನಾಗರಾಧನೆಗೆ ವಿಶೇಷ ಸ್ಥಾನವಿದೆ. ಅಲ್ಲಿ ಸರ್ಪಕ್ಕೆ ದೇವಾಲಯವನ್ನು ಕಟ್ಟಿ ಆರಾಧಿಸುವ ಪರಿಪಾಠವಿರುವುದ್ದನ್ನು ಇತಿಹಾಸಕಾರರು ತಿಳಿಸಿದ್ದಾರೆ.
- ಪ್ರಾಚೀನ **ಈಜಿಪ್ಟ್‌ನ** ರಾಜನ ಕಿರೀಟದಲ್ಲಿ ಸರ್ಪ ಲಾಂಛನವಿದೆ. ನೈಲ್‌ನದಿಯ ಜಲಾನಯನ ಪ್ರದೇಶಗಳಲ್ಲಿ ನಾಗಾರಾಧನೆಯ ಕುರುಹುಗಳಿರುವುದನ್ನು ಸಂಶೋಧಕರು ಶೋಧಿಸಿದ್ದಾರೆ. ಇವರುಗಳ **ಸೆಬ್ ದೇವತೆ** ನಾಗಗಳ ರಾಜ.
- **ಸ್ಕಾಟ್‌ಲ್ಯಾಂಡಿನ** ಶಿಲ್ಪಾ ಕಲಾಕೃತಿಗಳಲ್ಲಿಯು ಸರ್ಪ ಲಾಂಛನವಿದೆ.
- **ಅಫ್ರಿಕನ್ನರು ಬೊಂಬಾಟ್** ಎಂಬ ಜಾತಿಯ ಮರದಡಿ ಗೂಟ ಹಾಕಿ ಅದನ್ನು ಹಾವಿನ ಪ್ರತಿರೂಪವೆಂದು ನಂಬಿ ಪೂಜಿಸುತ್ತಿದ್ದರು. ನಾಗ ಲಾಂಛನದ ಮೇಲೆ ಕಲಬಾರ್ ಎಂಬ ಮರದ ಪಾತ್ರೆಯಲ್ಲಿ ಮೊಸರು ಮತ್ತು ಜೋಳದ ಹಿಟ್ಟಿನ ಅಭಿಷೇಕ ಮಾಡುತ್ತಿದ್ದರು.
  ಪರಮಾತ್ಮ ಜೀವರಾಶಿಗಳಲ್ಲಿ ಸರ್ಪನನ್ನೇ ಮೊದಲು ಸೃಷ್ಟಿಸಿದ ಎಂಬ ಪುರಾಣಕತೆ ಅವರಲ್ಲಿದೆ. ಇಲ್ಲಿ ನಾಗನನ್ನು ಹೆಬ್ಬಾವಿನ ರೂಪದಲ್ಲಿಯೂ ಸರ್ಪನ ರೂಪದಲ್ಲಿಯೂ ಪೂಜಿಸುತ್ತಾರೆ.
- **ಶ್ರೀಲಂಕಾ** ದೇಶವು ಮೊದಲು ನಾಗ ವಂಶಜರ ನಾಡಾಗಿದ್ದು ಅಲ್ಲಿ ನಾಗ ಪೂಜೆ ನಡೆಸುತ್ತಿದ್ದರು.
- **ಕಾಂಬೋಡಿಯ**ದಲ್ಲಿಯೂ ನಾಗಾರಾಧನೆ ಇದ್ದು, ಇಲ್ಲಿನ ನಾಗಾರಾಧನೆ ಸ್ಥಳವು ಪವಿತ್ರ ಯಾತ್ರಾ ಸ್ಥಳಗಳಾಗಿವೆ.
- **ಚೀನಾ** ದೇಶದವರು ಸರ್ಪ ಮಳೆ ತರುವ ದೇವರೆಂದು ನಂಬುತ್ತಾರೆ.
- **ಜಪಾನ್‌ನಲ್ಲಿ** ನಾಗ ಸಮೃದ್ಧಿಯ ಅಧಿದೇವತೆ ಆತ ದೇವದೂತನೆಂದು ನಂಬಿರುವರು.
- **ಫಿಜಿ** ದ್ವೀಪಗಳಲ್ಲಿ ಸರ್ಪವು ಸುರಳಿ ಕಟ್ಟಿ ಕುಳಿತ ಚಿತ್ರಗಳಿವೆ. ಇವು ಅಲ್ಲಿನ ಮುಖ್ಯ ದೇವತೆಗಳಲ್ಲಿ ಓರ್ವನಾಗಿರುವರು.
- **ಉತ್ತರ ಅಮೇರಿಕಾದಲ್ಲಿ** ಕೊಲಂಬಸ್‌ನ ಪ್ರವೇಶಕ್ಕಿಂತ ಪೂರ್ವದಲ್ಲಿ ಅಲ್ಲಿನ ಹೆಚ್ಚಿನ ಮೂಲ ನಿವಾಸಿಗಳು ಸರ್ಪ ಮಳೆ ನೀರಿನ ಅಧಿದೇವತೆಯೆಂದು ನಂಬಿರುತ್ತಾರೆ. ಬೆಳೆ ಮತ್ತು ಮಳೆ ನೀರಿಗಾಗಿ ಸರ್ಪವನ್ನು ಆರಾಧಿಸುವುದಾಗಿ ಸಂಶೋಧಕರು ತಿಳಿಸಿದ್ದರೆ.

ಭಾರತದ ಉದ್ದಗಲಕ್ಕೂ ಸರ್ಪಾರಾಧನೆಯ ವಿವಿಧ ಪ್ರಕಾರಗಳು ಇಂದಿಗೂ ಕಾಣಸಿಗುತ್ತದೆ. ಈ ದೇಶದಲ್ಲಿ ನಾಗಾರಾಧನೆಗೆ ಇರುವಷ್ಟು ಪ್ರಾಶಸ್ತ್ಯ ಪ್ರಾಯಃ ಇನ್ನಾವ ದೇಶದಲ್ಲೂ ಇರಲಾರದು. ನಮ್ಮ ಹೆಚ್ಚಿನ ಎಲ್ಲ ದೇವತೆಗಳು ಒಂದಲ್ಲ ಒಂದು ರೀತಿಯಲ್ಲಿ ನಾಗ ಸಂಬಂಧವನ್ನು ಹೊಂದಿದ್ದಾರೆ. ಶಿವ ನಾಗಭೂಷಣ, ವಿಷ್ಣು ನಾಗಶಯನ, ಲಂಬೋದರನ ಉದರವು ನಾಗನಿಂದ ಬಂಧಿತ, ಸುಬ್ರಹ್ಮಣ್ಯನಂತೂ ನಾಗರೂಪಿ. ದೇವಿ ಶಾಂತದುರ್ಗೆ ನಾಗಸ್ವರೂಪಿ. ಬಂಗಾಲದ ಮಾನಸಾದೇವಿ ನಾಗದೇವಿಯೆನಿಸಿದ್ದಾಳೆ. ಸರ್ಪಮುಕುಟ, ಸರ್ಪಕಂಕಣ, ಸರ್ಪಕುಂಡಲ, ಸರ್ಪಮುದ್ರಿಕೆ, ಸರ್ಪಾಯುಧಗಳಿಂದ ಅಲಂಕೃತವಾದ ದೇವತೆಗಳು ನೂರಾರು.

ಜ್ಯೋತಿಷ್ಯಶಾಸ್ತ್ರದಲ್ಲಿ, ಛಾಯಾಗ್ರಹವೆನಿಸಿದ ರಾಹುವು ಸರ್ಪರೂಪಿಯೆಂದು ಕಲ್ಪಿಸಲಾಗಿದೆ. ಅನಿಷ್ಟ ಕಾಲವೆನಿಸಿದ 'ರಾಹುಕಾಲ'ವನ್ನು ನಾಗದೇವರಿಗೆ ಸಂಬಂಧಿಸಿದ ಕಾಲವೆಂದು ನಂಬುತ್ತಾರೆ. ನಾಗನಿಗೆ ಸಂಬಂಧಪಟ್ಟ ಸೇವೆಗಳನ್ನು ಮಾತ್ರ ರಾಹುಕಾಲದಲ್ಲಿ ಮಾಡುತ್ತಾರೆ. 'ಕಾಲಸರ್ಪ ದೋಷ' ಮೊದಲಾದ ದೋಷವಿದ್ದವರು ರಾಹುವಿನ ಮಂತ್ರ ಜಪಿಸಬಹುದೆಂದೂ,

ಗೋಮೇಧಿಕ ಕೂರಿಸಿ ಬೆಳ್ಳಿಯ ಉಂಗುರವನ್ನು ಧರಿಸಬಹುದೆಂದೂ ಹೇಳಲಾಗಿದೆ. ಯೋಗಶಾಸ್ತ್ರದಲ್ಲಿ ಕುಂಡಲಿನಿ (ಸುಷುಮ್ನಾನಾಡಿ) ಯು ನಾಗಾಕೃತಿಯದೆನ್ನಲಾಗಿದೆ. ಬುದ್ಧ ಜಾತಕಗಳಲ್ಲಿ ನಾಗನ ಕಥೆಗಳಿವೆ. ಜೈನತೀರ್ಥಂಕರರ ವಿಗ್ರಹಗಳಲ್ಲಿ ನಾಗನ ಹೆಡೆಯ ಚಿತ್ರಗಳಿರುವುದುಂಟು. ಮೊಹೆಂಜೋದಾರೋದಲ್ಲಿ ನಾಗವಿಗ್ರಹಾರಾಧನೆ ಇತ್ತೆಂದು ತಿಳಿದುಬರುತ್ತದೆ. ನಾಗಕುಲ, ನಾಗರಖಂಡ, ನಾಗಲಾಂಛನಗಳ ಪ್ರಸ್ತಾಪಗಳನ್ನು ನಮ್ಮ ನಾಡಿನ ಸಾಂಸ್ಕೃತಿಕ ಅಧ್ಯಯನದಲ್ಲಿ ಆಗಾಗ ಇದಿರಾಗುತ್ತೇವೆ. ಜನಪದ ಸಾಹಿತ್ಯ ಕಲೆಗಳಲ್ಲಿ ನಾಗನ ಸುಳಿದಾಟ ಧಾರಾಳ. ನಾಗರಪಂಚಮಿ ನಮ್ಮ ದೇಶದ ಒಂದು ಮುಖ್ಯ ಹಬ್ಬ. ಅಂದು ದೇಶದ ಹಲವೆಡೆ ಜೀವಂತ ನಾಗಗಳಿಗೆ ಹಾಲೆಡುತ್ತಾರೆ. ನಾಗಪ್ರತಿಮೆಗಳಿಗಂತೂ ಪುಷ್ಕಳ ಹಾಲಿನ ಅಭಿಷೇಕ, ಸ್ಕಂದಷಷ್ಟಿಯೂ ಇಂತಹದೇ ಹಬ್ಬ. ಇಂದಿಗೂ ವೈವಿಧ್ಯಪೂರ್ಣವಾದ ನಾಗಾರಾಧನಾ ಸಂಪ್ರದಾಯಗಳು ಬಹುವಾಗಿ ಜೀವಂತವಿರುವ ಮುಖ್ಯ ಪ್ರದೇಶವೆಂದರೆ ಅವಿಭಜಿತ ದಕ್ಷಿಣಕನ್ನಡ ಮತ್ತು ಅದರ ದಕ್ಷಿಣಕ್ಕಿರುವ ಕೇರಳ. ತುಳುನಾಡು ನಾಗಲೋಕವಾಗಿತ್ತೆಂದೂ, ಇಲ್ಲಿಗೆ ನಾಗಬ್ರಹ್ಮನೆಂಬ ದೈವ'ವೇ ಸೃಷ್ಟಿಕರ್ತಸ್ಥಾನದಲ್ಲಿರುವುದಾಗಿಯೂ ಜನಪದ ಪ್ರತೀತಿ ಇದೆ. ಬ್ರಹ್ಮ, ನಾಗಬ್ರಹ್ಮ, ನಾಗಲಿಂಗ, ಬ್ರಹ್ಮಲಿಂಗ, ನಾಗಬ್ರಹ್ಮಲಿಂಗೇಶ್ವರ, ನಾಗಯಕ್ಷ(ಕ್ಷಿ), ಬೆರ್ಮೆರ್, ಶೇಷನಾಗ, ಅನಂತಪದ್ಮನಾಭ, ಸುಬ್ರಹ್ಮಣ್ಯ ಮೊದಲಾದ ಬೇರೆ ಬೇರೆ ನಾಮರೂಪಗಳಿಂದ ಆತನನ್ನು ತುಳುನಾಡಿನಲ್ಲಿ ಆರಾಧಿಸುತ್ತಾರೆ. ತುಳುನಾಡಿಗೆ 'ಆಲುಕ' ಎಂಬುದು ಪ್ರಾಚೀನ ಹೆಸರುಗಳಲ್ಲೊಂದೆಂದೂ 'ಆಲುಕ' ಎಂದರೆ ಸರ್ಪರಾಜನೆಂದು ಹೇಳಿಕೆ ಇದೆ. ಶಂಖಕುಲದ ನಾಗವಂಶೀಯರು ತುಳುನಾಡಲ್ಲಿದ್ದರೆಂದು ಗೋವಿಂದ ಪೈಗಳು ಅಭಿಪ್ರಾಯ ಪಡುತ್ತಾರೆ.

ಅಧ್ಯಯನಕ್ಕೊಳಪಡಿಸಿದ ಉಡುಪಿ ಜಿಲ್ಲೆಯಲ್ಲಿ ಹೆಜ್ಜೆ ಹೆಜ್ಜೆಗೂ ನಾಗನಬನ, ನಾಗನಕಟ್ಟೆ, ನಾಗನಕಲ್ಲು, ನಾಗನಹುತ್ತ, ನಾಗದೇವಸ್ಥಾನ, ಆಲಡೆಗಳನ್ನು ಚಿತ್ತೇರಿಗಳನ್ನು ಇಂದಿಗೂ ಕಾಣಬಹುದು. ಪ್ರತಿಯೊಂದು ಮನೆತನದ ಪೂರ್ವಾರ್ಜಿತ ಸ್ಥಳದಲ್ಲಿ ನಾಗನ ಬನವಾಗಲೀ ನಾಗಾಲಯವಾಗಲೀ ಇಲ್ಲದಿರುವುದಿಲ್ಲ. ಸಂತಾನ ಪ್ರದವೆನಿಸಿ ಆರೋಗ್ಯ ಭಾಗ್ಯದಾತನಾದ ಈ ದೈವತದ ಅನುಗ್ರಹವನ್ನು ಅಂದಿನವರು ಬಯಸಿದ್ದರು. ಇಂದೂ ಆ ನಂಬಿಕೆ ಸಾಕಷ್ಟು ಊರ್ಜಿತವಾಗಿಯೇ ಇದೆ. ಪ್ರತಿಯೊಂದು ದೇವಸ್ಥಾನ, ಭೂತಸ್ಥಾನಕ್ಕೂ ಸಂಬಂಧಪಟ್ಟಂತೆ ಪ್ರತ್ಯೇಕ ನಾಗಬನ ಅಥವಾ ನಾಗಪ್ರತಿಷ್ಠೆಗಳು ಇದ್ದೆ ಇರುತ್ತವೆ. ಯಾವುದೇ ಆರಾಧನೆಯ ಸಂಕೀರ್ಣವಾದರೂ ನಾಗನಿಗೆ ಅನಿವಾರ್ಯವಾದೊಂದು ಸ್ಥಾನ ಮೀಸಲಿರುತ್ತದೆ. ಭೂಮಿಯ ಪುತ್ರನೆನಿಸಿದ ನಾಗನಿಗೆ ನೆಲದ ಒಡೆತನವನ್ನು ಆರೋಪಿಸಲಾಗುತ್ತದೆ. ಹಾಗಾಗಿ ನಾಗ 'ಸ್ಥಳ'ಕತ್ತೃವಾಗಿ' (ಕ್ಷೇತ್ರಪಾಲನಾಗಿ) ಮನ್ನಣೆ ಪಡೆಯುತ್ತಾನೆ. ಆಲಡೆಯೆಂಬ ದೈವಸಂಕೀರ್ಣದಲ್ಲಿ ನಾಗಬ್ರಹ್ಮ ಒಂದು ಪ್ರಧಾನ' ದೇವತೆ.

**ಮರಾಟಿನಾಯ್ಕ ಮತ್ತು ಮರಾಟಿಗರ ನಾಗಾರಾಧನೆಯ ಕುರಿತು ನಂಬಿಕೆಯ ಬಗ್ಗೆ ಸಮುದಾಯವಾರು ಹಂಚಿಕೆ**

ಕರಾವಳಿ ಕರ್ನಾಟಕದ ಎರಡು ಭಾಷಾ ಪ್ರದೇಶಗಳಾದ ತುಳು ಮತ್ತು ಕನ್ನಡ ಪ್ರದೇಶಗಳೆರಡಲ್ಲೂ ನಾಗ ಬಹು ಜನಪ್ರಿಯ ದೈವ. ಆರಾಧನೆ ಎಂದರೆ ಪೂಜೆ, ಉಪಾಸನೆ ಎಂದರ್ಥ ಬರುತ್ತದೆ. 'ನಾಗ' ಎಂದರೆ ನಾಗರಹಾವು 'ಸರ್ಪ' ಎಂದು ಅರ್ಥ ಕೊಡುತ್ತದೆ. ಹಾವನ್ನು ದೇವರ ರೂಪದಲ್ಲಿ ಚಿತ್ರೀಕರಿಸಿ, ಕಲ್ಪಿಸಿಕೊಂಡು, ಅವಾಹನೆ ಮಾಡಿ ಸ್ವಾಮಿಕೋಲ, ಕಾಡ್ಯನಾಟ, ಅನಂತರ ವೃತ (ನೋಂಪು) ತನು ಹಾಕುವುದು, ನಾಗದರ್ಶನ, ಸರ್ಪಂಕೋಲ, ಆಶ್ಲೇಷಬಲಿ, ಡಕ್ಕೆಬಲಿ, ನಾಗಮಂಡಲ, ಬ್ರಹ್ಮಮಂಡಲ, ಸರ್ಪ ಸಂಸ್ಕಾರ ಮುಂತಾದ ರೂಪದಲ್ಲಿ ಮತ್ತು ಪ್ರಕಾರಗಳಲ್ಲಿ ಆರಾಧಿಸುತ್ತಿರುವುದನ್ನು ನಾಗಾರಾಧನೆ ಎಂದು ಕರೆಯಬಹುದು.

**ಮರಾಟಿ ಸಮುದಾಯಗಳ ನಾಗ ಬ್ರಹ್ಮಸ್ಥಾನದಲ್ಲಿರುವ ಪರಿವಾರ ದೈವಗಳು ಮತ್ತು ಆರಾಧನೆಗಳು:**

**ಅ) ರಕ್ತೇಶ್ವರಿ:**

ರಕ್ತೇಶ್ವರಿಯನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಅಮ್ಮನವರು, ಹೊನ್ನೋಲೆ ಕಿವಿಯವಳು, ಹೊತ್ತಾರೆ ನೆರಿಯವಳು, ಭೂಮಿ ತಾಯಿ ಎಂದು ವರ್ಣಿಸಿರುವರು. ಕೆಂಪು ರಕ್ತೇಶ್ವರಿ, ಶಾಂತರಕ್ತೇಶ್ವರಿ, ಸಂಹಾರ ರಕ್ತೇಶ್ವರಿ, ರಕ್ತಗಂಧಿ, ರಕ್ತಾಕ್ಷಿ ಯೋಗಿನಿ ಗಣಗಳ ಪರಿವಾರವುಳ್ಳವರು ಎಂದು ಹೇಳುತ್ತಾರೆ. ಇವಳು ಮೂಕಾಸುರವನ್ನು ಕೊಂದು ಕೊಲ್ಲೂರಿನಲ್ಲಿ ನೆಲೆನಿಂತವಳು. ಮಹಿಷಾಸುರನನ್ನು ಕೊಂದವಳು ಎಂಬುದಾಗಿ ವರ್ಣಿಸುತ್ತಾರೆ. ಮರಾಠಿಗಳು ವಾಸ್ತವ್ಯವಿರುವ ದಕ್ಷಿಣಕನ್ನಡ ಜಿಲ್ಲೆಯ, ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯ ಕವತ್ತಾರಿನಲ್ಲಿ ರಕ್ತೇಶ್ವರಿಯನ್ನು 'ಸಿರಿ' ಎಂದು ಅಲ್ಲಿನ ಜನಪದರು ಹೇಳುತ್ತಾರೆ.

ಕವತ್ತಾರುನಲ್ಲಿ ಅಬ್ಬಗ-ದಾರಗೆ, ಸೊನ್ನೆಗಿಂಡೆಯವರಿಗೆ ಆರಾಧನೆ ಇರುತ್ತದೆ. ಸಿರಿಯ ಆರಾಧನೆ ಇರುವುದಿಲ್ಲ. ಇವರಿಗೆ ಮೂರ್ತಿ ರೂಪವಿದ್ದರೆ ರಕ್ತೇಶ್ವರಿಗೆ ಪ್ರತ್ಯೇಕವಾಗಿ ಒಂದು ಸಾಮಾನ್ಯ ಕಲ್ಲು ಇರುವುದ್ದನ್ನು ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಕಂಡಿರುವೆನು. ಆ ಪ್ರದೇಶದ ತುಳುವರು ರಕ್ತೇಶ್ವರಿ ಎಂದು ಹೇಳುವುದಿಲ್ಲ ಅವರು 'ಲೆಕ್ಕೇಸಿರಿ' ಎಂದು ಹೇಳುತ್ತಾರೆ. ಸಿರಿ ಪಾಡ್ದನದ ಸಿರಿಯ ಪೂರ್ಣ ಹೆಸರು 'ಬಾಲೆಕ್ಕಿ ಸಿರಿ'. ಈ ಹೆಸರೇ ಕಾಲಾಂತರದಲ್ಲಿ 'ಲೆಕ್ಕಿಸಿರಿ' ಆಗಿರುವ ಸಾಧ್ಯತೆ ಇದೆ. ಲೆಕ್ಕೆಸಿರಿ ಎಂಬುದು ಸಂಸ್ಕೃತೀಕರಣಗೊಂಡು 'ರಕ್ತೇಶ್ವರಿ' ಆಗಿದೆ. ಲೆಕ್ಕೆಸಿರಿಗೆ ಕೊಲ ರೂಪದಲ್ಲಿ ಕೂಡ ಆರಾಧನೆ ಇದೆ. ಆಗ ಈ ದೈವ ಒಂದು 'ಲೆಕ್ಕೆಗಿಡ' ಗೆಲ್ಲನ್ನು ಕೈಯಲ್ಲಿ ಹಿಡಿದುಕೊಳ್ಳುತ್ತದೆ.

ರಕ್ತೇಶ್ವರಿಯು ರಾಕ್ಷಸರನ್ನು ನಾಶ ಮಾಡಲು ಬಂದ ಶಕ್ತಿ. ಆದಿಶಕ್ತಿಯು ರಕ್ತಾಬೀಜಾಸುರನನ್ನು ನಾಶ ಮಾಡಲು ಸೃಷ್ಟಿಸಿದ ರೂಪವೇ ರಕ್ತೇಶ್ವರಿ. ಪಾಡ್ದನದಲ್ಲಿ ಈತಳು ನಾಗನ' ಬಲಭಾಗದಲ್ಲಿ ಕುಳಿತು ಭೂಮಿಗೆ ಇಳವಳು ಎಂದು ಹೇಳದೆ. ಸಪ್ತದೇವಿಯರು ಮೇಲಿನ ಲೋಕದಿಂದ ಭೂಲೋಕಕ್ಕೆ ಬಂದು ದಕ್ಷಿಣ ದಿಕ್ಕಿನಲ್ಲಿ ಒಂದು ಸತ್ಯದ ಕಟ್ಟೆಯಲ್ಲಿ ವಿಶ್ರಾಂತಿ ಪಡುತ್ತಾರೆ. ಬಾಯಾರಿಕೆ' ನೀಗಿಸಲು ಸಿಯಾಳವನ್ನು 'ರಾಣಿ' ಎನ್ನುವ ಕೆಲಸದ ಹೆಣ್ಣು ಕೆತ್ತಿ ಕೊಡುವಾಗ, ಸಿಯಾಳಕ್ಕೆ ಅವಳೇ ಬಾಯಿ ಹಾಕುತ್ತಾಳೆ. ಆಗ ದೇವಿ ಕೋಪದಿಂದ ಆ ಹುಡುಗಿಯನ್ನು ಮಾಯ ಮಾಡುತ್ತಾಳೆ. ಮೇಲಿನ ಲೋಕಕ್ಕೆ ಕೊಂಡು ಹೋಗುತ್ತಾರೆ. ಮುಂದೆ ಆದಿಶಕ್ತಿಯು ರಕ್ತಬೀಜಾಸುರನ ಜೊತೆ ಯುದ್ಧ ಮಾಡುವಾಗ ಆರು ಜನ ತಂಗಿಯರು ದೇವಿಯಲ್ಲಿ ಆ ದಿನ ಮಾಯ ಮಾಡಿದ ಹುಡುಗಿಯನ್ನು ಕರೆಸಿ ಎನ್ನುತ್ತಾರೆ. ಆಗ ಅವಳು ನನ್ನ ಶರೀರದಲ್ಲಿ ಲೀನವಾಗಿದ್ದಾಳೆ. ರಕ್ತೇಶ್ವರಿಯೆಂಬ ಹೆಸರಿನಲ್ಲಿ ಅವತರಿಸುತ್ತಾಳೆ. ಅಂತೆಯೇ ಅವಳು ರಕ್ತ ಬೀಜಾಸುರನ ರಕ್ತವನ್ನು ಹೀರಿ ಸಂಹಾರ ಮಾಡುತ್ತಾಳೆ. ರಕ್ತ ಬೀಜಾಸುರನ ಸಂಹಾರದ ನಂತರ ಹುಡುಗಿ ತಾಯಿ ಇನ್ನು ಮೇಲೆ ನನಗೇನು ನೆಲೆ? ಎಂದು ವಿನಂತಿಸುತ್ತಾಳೆ. ಆಗ ಆದಿಶಕ್ತಿಯು ನೀನು ಭೂತಕ್ಕಿಂತ ದೊಡ್ಡವಳು, ದೇವರಿಗಿಂತ ಸಣ್ಣವಳು ನಾಗನ ಜೊತೆ ಆರಾಧನೆ ಪಡೆಯುತ್ತಾ, ನಾಗನಿಗೆ ತಂಗಿಯಾಗಿ, ನಾಗಾರಾಧನೆ ಮಾಡುವಾಗ ನೀನು ಕೂಡ ಜೊತೆಯಲ್ಲಿ ಆರಾಧನೆ ಪಡೆ ಎಂದು ಹೇಳ ಆ ಹುಡುಗಿಯನ್ನು ಮಾಯ ಮಾಡುತ್ತಾರೆ. ಇಂದಿಗೂ ಕೂಡ ಜನಪದರಲ್ಲಿ ಅವಳು ಮಾಯದಲ್ಲಿ ಬಂದು ದೈವಗಳಿಗೆ ಮಾತೆಯಾಗಿ, ನಾಗರಿಗೆ ತಂಗಿಯಾಗಿ ಲೋಕ ರಕ್ಷಣೆ ಮಾಡುತ್ತಾಳೆ ಎಂಬ ಕಥೆಯ ಪ್ರಚಲಿತದಲ್ಲಿವೆ. ಇಲ್ಲಿ ನಾಗನೊಂದಿಗೆ ಸೇರಿಕೊಂಡಿರುವುದರಿಂದ ಅವಳು 'ನಾಗಬ್ರಹ್ಮ ರಕ್ತೇಶ್ವರಿ' ಎಂದು ಕರೆಸಿಕೊಳ್ಳುವಳು.

ಕಾರ್ಕಳದಲ್ಲಿ ಜೈನ ಸಂಸ್ಕೃತಿಯ ಪ್ರಭಾವವಿರುವುದರಿಂದ ಯಕ್ಷಿಗೂ ರಕ್ತೇಶ್ವರಿಗೂ ಸಂಬಂಧವಿರುವುದು ಕಂಡುಬರುತ್ತದೆ. ಲೆಕ್ಕಿ ಮರದಡಿಯಲ್ಲಿ ನಿಂತ ಪದ್ಮಾವತಿ ಯಕ್ಷಿಗೂ ಲೆಕ್ಕಿಸಿರಿಗೂ ಅನೇಕ ಸಾಮ್ಯತೆವಿದೆ. ಲೆಕ್ಕಿಸಿರಿ ದೈವದ ಬಣ್ಣ ಕೆಂಪು. ಆದ್ದರಿಂದ ಈ ದೈವವನ್ನು ರಕ್ತೇಶ್ವರಿ ಎನ್ನಲಾಗುತ್ತದೆ. ಜೈನರ ಯಕ್ಷಿಯಲ್ಲಿ ಒಂದಾದ ಪದ್ಮಾವತಿ ಯಕ್ಷಿಯ ಬಣ್ಣ ಕೆಂಪು ಅಥವಾ ರಕ್ತಬಣ್ಣ. ಧರಣೇಂದ್ರ ಯಕ್ಷ ಹಾಗೂ ಪದ್ಮಾವತಿ ಯಕ್ಷಿ ಸತಿಪತಿಯರು. ಪದ್ಮಾವತಿಯನ್ನು ಲೆಕ್ಕಿಯಮ್ಮ, ಲೊಕ್ಕಿಯಮ್ಮ ಎಂದು ಕರೆಯುತ್ತಾರೆ. ಕರಾವಳ ಜಿಲ್ಲೆಯಲ್ಲಿ ನಾಗ ಪರಿವಾರದಲ್ಲಿ ಸೇರಿರುವ ಲೆಕ್ಕೇಸಿರಿ ದೈವದ ಭೂತ ನರ್ತಕ ಲೆಕ್ಕಿಗಿಡದ ಸೊಪ್ಪನ್ನು ರೆಂಬೆಯನ್ನು ಹಿಡಿದು

ನರ್ತಿಸುವ ಸಂಪ್ರದಾಯ ಕೆಲವೆಡೆ ಕಾಣಿಸುತ್ತದೆ. ಲೆಕ್ಕಿಯನ್ನು ನೆಕ್ಕಿ (ತುಳುಪದ) ಎಂಬುದಾಗಿ ಕೂಡ ಕರೆಯುತ್ತಾರೆ. ಇದರಿಂದ ಪದ್ಮಾವತಿ ಯಕ್ಷಿ ಹಾಗೂ ರಕ್ತೇಶ್ವರಿ ದೈವಾರಾಧನೆಯು ಒಂದೇ ದೈವದ ಆರಾಧನೆ ಎಂದು ಕಷ್ಟವಾಗುತ್ತದೆ. ರಕ್ತೇಶ್ವರಿಯು ನಾಗಕುಲಕ್ಕೆ ಸಂಬಂಧಿಸಿದ ದೈವ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ರಕ್ತೇಶ್ವರಿಯು ನಾಗನ ಬಲಬದಿಯಲ್ಲಿ ಸ್ಥಾನವನ್ನು ಪಡೆದು ಆರಾಧನೆಗೊಳ್ಳುವರು.

**ಆ) ನಂದಿಗೋಣ:**

ಶಿವನ ವಾಹನವಾದ 'ಬಸವ'ನನ್ನು ನಂದಿ ಎನ್ನುತ್ತಾರೆ. ಕೋಣ ಗದ್ದೆ ಉಳಲು ಉಪಯೋಗಿಸುತ್ತಿದ್ದ ಪ್ರಾಣಿ. ಈ ಎರಡು ಒಟ್ಟಿಗೆ ಸೇರಿ ನಂದಿಗೋಣ ಎಂಬ ಹೆಸರಿನಲ್ಲಿ ಗೊಂದಲವಿದೆ. ತಲೆಗೆ ಖಡ್ಗವನ್ನಿಟ್ಟವನು, ಉದರ ಗಂಟೆಯ ಕಟ್ಟಿ ಛಲದಂಕನಾದವನು ಎಂದು ನಂದಿಗೆ ಹೇಳಿರುವರು. ನಾಗಮಂಡಲ ಆಚರಣೆಯ ಸಂದರ್ಭ ಹಿರೆನಂದಿ ಮತ್ತು ಕಿರೆನಂದಿ ಎಂಬ ಇಬ್ಬರ ಕಥೆ ಬರುತ್ತದೆ. ಉಳ್ಳಾಲ ಎಂಬ ಸ್ಥಳ ಚಿನ್ನಮ್ಮ ಹುಟ್ಟಿ, ಬಾಳುತ್ತಿದ್ದಳು. ೧೬ ವರ್ಷದಲ್ಲಿ ಋತುವಂತಿಯಾಗಿ ಬಾಳುವಾಗ ಚಿಕ್ಕಯ್ಯ ಶೆಟ್ಟಿ ಮತ್ತು ಜೋಗಪ್ಪ ಶೆಟ್ಟಿ ಹುಟ್ಟಿದರು. ಯುವಕರಾದ ದಾಯಾದಿ ಮತ್ಸರದಿಂದ ರಣ ಕಾಳಗವಾಯಿತು. ಕಾಳಗದಲ್ಲಿ ಇಬ್ಬರು ಸತ್ತು ಹಿರೆನಂದಿ ಮತ್ತು ಕಿರೆನಂದಿ ಎನಿಸಿಕೊಂಡು ಉಳ್ಳಾಲದಲ್ಲಿದ್ದರು. ಒಂದು ದಿನ ನೆರೆ ಬಂದು ಉಳ್ಳಾಲ ತೇಲಿ ಹೋಯಿತು. ಉತ್ತರದಿಕ್ಕಿಗೆ ಹೋಯಿತು. ಇಲ್ಲಿಯೇ ಸ್ಥಳ ಒಳ್ಳೆಯದೆಂದು ಅಲ್ಲಲ್ಲಿ ಮನೆ ಕಟ್ಟಿಸಿಕೊಂಡು ಹಿರೆನಂದಿ, ಕಿರೆನಂದಿಯರು ಭೇದಭಾವವಿಲ್ಲದೆ ಜೀವಿಸುತ್ತಿದ್ದರು.

**ಇ) ಯಕ್ಷಿ:**

ಯಕ್ಷಿಯು ದೇವಲೋಕ ಹೆಣ್ಣೆಂದು, ಬಿಳಿವರ್ಣದವಳೆಂದು ಜಾನಪದಿಯರ ನಂಬಿಕೆಯಾಗಿದೆ. ಬೇರೆ ಬೇರೆ ಪ್ರದೇಶ ಬೇರೆ ಬೇರೆ ಸ್ವರೂಪವನ್ನು ವ್ಯಕ್ತಪಡಿಸುತ್ತಾಳೆ ಅವಳು. ಗಂಡುಯಕ್ಷಿ, ಹೆಣ್ಣು ಯಕ್ಷಿ, ಭೂತ ಯಕ್ಷಿ, ಪ್ರೇತ ಯಕ್ಷಿ, ತಾಂಬೂಲ ಯಕ್ಷಿ, ನಾಗ ಯಕ್ಷಿ, ಬ್ರಹ್ಮ ಯಕ್ಷಿ ಮುಂತಾದ ರೂಪಗಳಿವೆ. ಯಕ್ಷಿಯು ಕತೆಯಲ್ಲಿ ದೇವಲೋಕದಲ್ಲಿರುವ ಯಕ್ಷಿಗೆ ಭೂಲೋಕದಲ್ಲಿ ಸೇವೆ ನಡೆಯುವಾಗ ಯಕ್ಷ ವಾದ್ಯವ ಹಿಡಿದು ಬಾರಿಸುವಾಗ, ಡಕ್ಕೆಯ ಧ್ವನಿ ಕೇಳಿ ನಿದ್ರೆ ಬಾರದಿರಲು ದೇವೇಂದ್ರನ ಬಳಿಗೆ ಹೋಗುತ್ತಾಳೆ. ದೇವೇಂದ್ರ ಈತಳನ್ನು ಗಮನಿಸದೇ ಇರುವಾಗ ಕೋಪಗೊಂಡು ನಂದಿಬಟ್ಟಲು ಹೂವು ಕ್ಕೊಯ್ದು, ಮಾಲೆಯ ಧರಿಸಿದ್ದಾಗ, ದೇವೇಂದ್ರನ ಪೀಠ ತಲೆ ಕೆಳಗಾಯಿತು ಆಗ ದೇವೇಂದ್ರ ದೇವ ಪೀಠ ತಂದುಕೊಟ್ಟು, ದೇವಾಭರಣವನ್ನು ಹೆಣ್ಣಾನೆಯನ್ನು ಕೊಡುತ್ತಾನೆ. ಅವಳು ಗಂಡು ಯಕ್ಷನ ಕೈ ಹಿಡಿಕೊಂಡು ಭೂಲೋಕಕ್ಕೆ ತೆರಳಿ ಅಶ್ವಥ ಮರದಡಿಯಲ್ಲಿ ಉಯ್ಯಾಲೆಯಾಡುತ್ತಾಳೆ. ಮುಂದೆ ಆತಳು ನಾಗಮಂಡಲ ನಡೆಯುವ ಸ್ಥಳಕ್ಕೆ ಬರುತ್ತಾಳೆ ಎಂಬ ನಂಬಿಕೆಯಿದೆ.

**೪.೪. ನಾಗನಿಗೆ ಸಂಬಂಧಿಸಿದ ಸೇವಾ ಪ್ರಕಾರಗಳು/ ಆರಾಧನೆಗಳು:**

ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಮರಾಟಿ ಮತ್ತು ಮರಾಟಿನಾಯ್ಕರು ತಮ್ಮದೇಯಾದ ತಮ್ಮ ಮೂಲ ಕುಟುಂಬದ ನಾಗಬ್ರಹ್ಮ ಸ್ಥಾನದಲ್ಲಿ ನಾಗನನ್ನು ವಿವಿಧ ಪ್ರಕಾರದಲ್ಲಿ ಪೂಜೆ ಮಾಡುವುದಲ್ಲದೆ ತಾವು ವಾಸ್ತವ್ಯವಿರುವ ಪ್ರದೇಶದ ಇತರ ಜಾತಿಯವರು ಆರಾಧಿಸುತ್ತಿರುವ ನಾಗನಿಗೆ ಹರಕೆ ರೂಪದಲ್ಲಿ ತನು – ತಂಬಲ ಅರ್ಪಣೆ, ನಾಗಮಂಡಲ, ಆಶ್ಲೇಷ ಬಲಿ, ಸರ್ಪ ಸಂಸ್ಕಾರಕ್ಕೆ ಶಕ್ತ್ಯಾನುಸಾರವಾಗಿ ವಸ್ತು ಅಥವಾ ಧನ ರೂಪದಲ್ಲಿ ಸಹಾಯಧನ ನಾಗಾರಾಧನೆಗೆ ನಡೆದುಕೊಳ್ಳುತ್ತಿರುವುದು ಕಂಡು ಬಂದಿರುತ್ತದೆ.

ಮರಾಟಿ ಮತ್ತು ಮರಾಟಿನಾಯ್ಕರು ತಮ್ಮದೇ ಆದ ರೀತಿಯಲ್ಲಿ ತಮ್ಮ ಶಕ್ತ್ಯಾನುಸಾರವಾಗಿ ನಾಗಾರಾಧನೆ ನಡೆಸಿಕೊಂಡು ಬರುತ್ತಾರೆ. ನಾಗನಿಗೆ ಪ್ರತ್ಯೇಕವಾದ ಆರೂಡವನ್ನು ರಚಿಸಿ, ಅವುಗಳಲ್ಲಿ ರಕ್ತೇಶ್ವರಿ, ನಂದಿಗೋಣ, ಯಕ್ಷ / ಯಕ್ಷಿ ಮತ್ತಿತ್ತರ ಪರಿವಾರ ದೈವಗಳನ್ನು ಸ್ಥಾಪಿಸಿರುವುದು ಕ್ಷೇತ್ರಕಾರ್ಯದಲ್ಲಿ ಅವಲೋಕನ ಮಾಡಲಾಗಿದೆ.

ಮರಾಟಿಗರ ನಾಗಬ್ರಹ್ಮ ಸ್ಥಾನ (ನಾಗನ ಆರೂಡ) ದಲ್ಲಿ ಜರಗುವ ಸೇವೆ ಹಾಗೂ ಆರಾಧನೆಗಳು

೧) ತಂಬಿಲ ಅಥವಾ ತನು ಹಾಕುವುದು ೨) ಆಶ್ಲೇಷ ಬಲಿ ೩) ಸರ್ಪ ಸಂಸ್ಕಾರ

೪) ನಾಗ ದರ್ಶನ ೫) ನಾಗ ಪ್ರತಿಷ್ಠೆ

**ಅ) ತನು ಹಾಕುವುದು :** ಮರಾಟಿ ಮತ್ತು ಮರಾಟಿ ನಾಯ್ಕ ಈ ಎರಡು ಸಮುದಾಯದವರು ಬ್ರಾಹ್ಮಣ ಅರ್ಚಕರ ಮೂಲಕ ನಾಗನಿಗೆ ನಾಗ ತಂಬಿಲ ಅಥವಾ ತನು ಹಾಕುವುದು ಅಥವಾ ಹಾಲಿಟ್ಟು ಸೇವೆ ಮಾಡುತ್ತಾರೆ. ನಾಗರ ಪಂಚಮಿ ಅಥವಾ ಪ್ರತಿ ತಿಂಗಳಲ್ಲಿ ಬರುವ ಪಂಚಮಿಯ ದಿನದಂದು ನಾಗಬನಗಳಲ್ಲಿ ನಾಗನಿಗೆ ಹಾಲೆರುವುದು ಕಂಡುಬಂದಿರುತ್ತದೆ. ಇದಕ್ಕೆ 'ತನು' ಹಾಕುವುದು ಎಂದು ಕರೆಯಲಾಗುವುದು.

**ಆ) ಆಶ್ಲೇಷ ಬಲಿ :** ಗ್ರಹಚಾರ ದೋಷ ನಿವಾರಣಾರ್ಥ, ಸಂತಾನ ಪ್ರಾಪ್ತಿಗಾಗಿ, ಚರ್ಮವ್ಯಾಧಿ ಪರಿಹಾರಕ್ಕಾಗಿ ಹಾಗೂ ನಾಗ ಪ್ರೀತ್ಯರ್ಥವಾಗಿ ಆಶ್ಲೇಷ ಬಲಿ ನಡೆಸುವರು. ಪ್ರತಿ ತಿಂಗಳ ಆಶ್ಲೇಷ ನಕ್ಷತ್ರವು ನಾಗನಿಗೆ ಸಂಬಂಧಿಸಿದುದೆಂದು ನಂಬಲಾಗಿದೆ. ಆ ನಕ್ಷತ್ರದಂದು **ಅಶೇಷವಾಗಿರುವ** ನಾಗ ಸಂತತಿಯನ್ನು ಕರೆದು ಬಲಿ ಪ್ರದಾನ ಮಾಡಿ ಪೂಜಿಸುವುದಕ್ಕೆ 'ಆಶ್ಲೇಷ ಬಲಿ' ಎಂದು ಹೆಸರು. ಆಶ್ಲೇಷ ನಕ್ಷತ್ರದ ದಿನ ಹಗಲು ಅಥವಾ ರಾತ್ರಿ ಶುದ್ಧಿಕರಿಸಿದ ನಿರ್ದಿಷ್ಟ ಸ್ಥಳದಲ್ಲಿ ಅಥವಾ ನಿಗದಿಪಡಿಸಿದ ದೇವಸ್ಥಾನಗಳಲ್ಲಿ ಪಂಚವರ್ಣದ ಹುಡಿಗಳಿಂದ ಕಲಾತ್ಮಕವಾದ ಮಂಡಲ ಬರೆಯುತ್ತಾರೆ. ಸುರುಳಿ ಹಾಕಿ ಕುಳಿತ ಹೆಡೆಬಿಚ್ಚಿದ ನಾಗನನ್ನು ಈ ಮಂಡಲ ಹೊಲುತ್ತದೆ. ವೈದಿಕ ವಿಧಿಯಂತೆ ಪೂಜೆ ನಡೆದು ಈ ಮಂಡಲದೊಳಗೆ ಎಪ್ಪತ್ತಾರು ಪಿಂಡ (ಅನ್ನದ ಉಂಡೆ) ಹಾಗೂ ಅದರ ಮೇಲೆ ತಲಾ ಒಂದೊಂದು, ಅಕ್ಕಿಯಿಂದ ಮಾಡಿದ ಭಕ್ಷ್ಯವಾದ ಅಷ್ಟವನ್ನಿರಿಸಿ ಅದರ ಮೇಲೆ ಹಣತೆಗೆ ಸೋಡರನ್ನು (ದೀಪ) ಬೆಳಗಿಸುತ್ತಾರೆ. ಹೀಗೆ ಮಂಡಲ ರಚಿಸಿ ನಾಗನನ್ನು ತೃಪ್ತಿಗೊಳಿಸುವ ಈ ಆಚರಣೆಯನ್ನು ಭಕ್ತರು ಹನ್ನೆರಡು ಬಾರಿ ಸತತವಾಗಿ ನಡೆಸಿ ಹದಿಮೂರನೆ ಬಾರಿ 'ಉದ್ಯಾಪನೆ'ಯ ಮೂಲಕ ಮುಕ್ತಾಯಗೊಳಿಸಲಾಗುತ್ತದೆ. ಆಚರಣೆಯ ವೇಳೆ ಕೊನೆಯಲ್ಲಿ ನಾಗದರ್ಶನವಾಗುತ್ತದೆ.[೪೪] ಈ ಆಚರಣೆಯು ಆಧುನಿಕ ಸಮಾಜದಲ್ಲಿ ಪರಿಣಾಮಕಾರಿ ಪ್ರಭಾವವನ್ನು ಬೀರಿದೆ. ಇದೊಂದು ಮೂಡನಂಬಿಕೆಯಾಗಿದ್ದರೂ ಜನ ಸಾಮಾನ್ಯರ ನಂಬಿಕೆಯ ದೃಷ್ಟಿಯಿಂದ ಮಹತ್ವವನ್ನು ಅಲ್ಲಗಳೆಯುವಂತಿಲ್ಲ.

**ಇ) ಸರ್ಪ ಸಂಸ್ಕಾರ :** ವ್ಯಕ್ತಿಯೊಬ್ಬನ ಜೀವನದಲ್ಲಿ ಆತನ ಪೂರ್ವಜರು ನಾಗನನ್ನೋ, ನಾಗನ ಮೊಟ್ಟೆಯನ್ನು ನಾಶ ಮಾಡಿದರೆ ನಾಗದೋಷವಾಗಿ ಆತನನ್ನು ಹಿಂಬಾಲಿಸುತ್ತದೆ ಎಂಬ ನಂಬಿಕೆ ಕರಾವಳಿ ಪ್ರದೇಶದ ಜನತೆಯಲ್ಲಿದೆ. ಈ ದೋಷ ನಿವಾರಣೆಗಾಗಿ ಸಂತಾನ ಸಂಸ್ಕಾರ, ನಾಗಪ್ರತಿಷ್ಠೆ, ಆಶ್ಲೇಷಬಲಿ ಇತ್ಯಾದಿಗಳನ್ನು ನೆರವೇರಿಸುತ್ತಾರೆ. ಹಾಗೆಯೇ ಆಕಸ್ಮಿಕವಾಗಿ ಸರ್ಪದ ಶವವನ್ನು ಕಂಡರೆ ಅದಕ್ಕೆ ಸರ್ಪ ಸಂಸ್ಕಾರ ಮಾಡದೇ ಇರಬಾರದು ಎಂಬ ನಂಬಿಕೆಯಿದೆ. ಅಂತ್ಯ ಸಂಸ್ಕಾರ ಮಾತ್ರವಲ್ಲ. ಬ್ರಾಹ್ಮಣರ ಮುಖೇನ ವಿಧಿಯುಕ್ತ ಉತ್ತರ-ಕ್ರಿಯೆಯನ್ನು ಮಾಡಬೇಕು ಎಂಬ ಜನಪದ ನಿಯಮವಿದೆ.

ಹಿಟ್ಟಿನಿಂದ ಎರಡು ಸರ್ಪಾಕೃತಿಗಳನ್ನು ಮಾಡಿ ಅವುಗಳಲ್ಲಿ ಒಂದು ಮೃತವಾಯಿತೆಂದು ಭಾವಿಸಿ ಅದನ್ನು ವಿಧಿಯಂತೆ ಸುಟ್ಟು ಅಪರ ಕರ್ಮ ಮಾಡುವುದು. ಮತ್ತೊಂದನ್ನು ಹುತ್ತದ ಸಮೀಪ ಬಿಡುವುದು. ಬ್ರಹ್ಮಚಾರಿಗಳನ್ನು ಆಮಂತ್ರಿಸಿ ಅವರಿಗೆ ವಿವಿಧ ಸರ್ಪ ದೇವತೆಗಳನ್ನು ಅವಾಹಿಸಿ ಭೋಜನ ದಾನಾದಿಗಳಿಂದ ಅವರನ್ನು ತೃಪ್ತಿಪಡಿಸಿ ಆಶೀರ್ವಾದ ಪಡೆಯುವುದು ಸರ್ಪ ಸಂಸ್ಕಾರದ ಮುಖ್ಯ ಕ್ರಿಯೆಗಳು.

**ಈ) ನಾಗಪ್ರತಿಷ್ಠೆ :** ವಿಷಯ ಸಂಖ್ಯೆಯ ಹೆಡೆಗಳಿಂದ ನಾಗನ ಅಥವಾ ನಾಗ ಯಕ್ಷ ಯಕ್ಷಿಯರ ಬಿಂಬಗಳನ್ನು ಶಿಲೆಯಲ್ಲಿ ರೂಪಿಸಿ ಅವುಗಳನ್ನು ನಾಗಬನದಲ್ಲಿ ಪ್ರತಿಷ್ಠಾಪನೆ ಮಾಡುತ್ತಾರೆ. ಪ್ರಾಚೀನ ಕಾಲದಲ್ಲಿ ನಿರ್ದಿಷ್ಟ ಮರಗಳ ಬುಡದಲ್ಲಿ ನಾಗನ ಕಲ್ಲುಗಳನ್ನಿರಿಸಿ ಪೂಜಿಸುತ್ತಿದ್ದರು. ಸುತ್ತಲು ಮರಗಿಡಗಳು ದಟ್ಟವಾಗಿ ಬೆಳೆದಿರುತ್ತಿದ್ದವು. ಈ ನಾಗಬನದ ಸ್ವರೂಪಗಳು ಇತ್ತೀಚಿನ ವರ್ಷಗಳಲ್ಲಿ ವ್ಯತ್ಯಸ್ತವಾಗುತ್ತ 'ಚಿತ್ರಕೂಟ' ರಚನೆಯೊಂದಿಗೆ ಕಾಂಕ್ರೀಟಿನ ನಾಗಾಲಯಗಳು ಹೆಚ್ಚಾಗಿ ಮೇಲೇಳ ತೊಡಗಿದೆ.

**ಉ) ನಾಗದರ್ಶನ :** ನಾಗಬನ, ಚಿತ್ತೇರಿ, ಭಂಡಾರಮ್ಮನ ಸನ್ನಿಧಿ ಅಥವಾ ನಾಗನ ಚಿತ್ರಕೂಟದಲ್ಲಿ ಬ್ರಾಹ್ಮಣ ಪಾತ್ರಿಯ ಮೈಮೇಲೆ ನಾಗ ದೇವತೆಯನ್ನು ಅವಾಹಿಸಿಕೊಂಡು ಸರ್ಪದಂತೆ ಬುಸುಗುಡುತ್ತಾ ನಾಗನ ಚಲನೆಯನ್ನು ಅನುಕರಿಸುತ್ತಾ ವಿಶಿಷ್ಟವಾಗಿ ಪಾತ್ರಿ ಕಂಪಿಸುತ್ತದೆ. ತನ್ನ ಕೈಯಲ್ಲಿರುವ ಹಿಂಗಾರವನ್ನು ಆಗಾಗ ಮುಖಕ್ಕೆ ಉಜ್ಜಿಕೊಳ್ಳುತ್ತಾನೆ. ಸಂಬಂಧಿತ ಭಕ್ತರು ತಮ್ಮ ಸಮಸ್ಯೆಗಳನ್ನು ನಾಗನಲ್ಲಿ ಅರಿಕೆ ಮಾಡಿಕೊಂಡು, ನಾಗಪಾತ್ರಿಯ ಮುಖದಿಂದ ಪರಿಹಾರದ ಮಾತನ್ನು, ಆತನ ಕೈಯಿಂದ ಹಿಂಗಾರ ಮತ್ತು ಆರಸಿನ ಹುಡಿಯ ಪ್ರಸಾದವನ್ನು ಪಡಿಯುತ್ತಾರೆ.

**ಡಾ. ಎ.ವಿ. ನಾವಡ** ಅವರು ನಾಗಾರಾಧನೆಯಲ್ಲಿ ಹಲವಾರು ಪ್ರಕಾರಗಳನ್ನು ಗುರುತಿಸಬಹುದು. ಮುಖ್ಯವಾಗಿ ಐದು ಪ್ರಕಾರಗಳಲ್ಲಿ ಗುರುತಿಸಿರುತ್ತಾರೆ. ಅವುಗಳೆಂದರೆ

೧. ಕುಂದಾಪುರ ತಾಲೂಕಿನಲ್ಲಿ ವಾಸ್ತವವಿರುವ ಪಾಣರರು **ಪಾಣಾರಾಟದ** ಸಂದರ್ಭದಲ್ಲಿ ಆಚರಿಸುವ ಸ್ವಾಮಿಕೋಲ

೨. ಮೇರ ಹರಿಜನರು ನಡೆಸುವ 'ಕಾಡ್ಯನಾಟ'

೩. ಉಪ್ಪಾರ ಹರಿಜನರು ತಮ್ಮದೇ ಆದ ನಾಗಬನಗಳಲ್ಲಿ ನಡೆಸುವ 'ಹುಟ್ಟು' ಆಚರಣೆ

೪. ಜನಪದ ಮೂಲದ ಆದರೆ ಸಂಸ್ಕೃತ ಪ್ರಭಾವಕ್ಕೊಳಗಾದ ಡಕ್ಕೆ ಬಲಿ, ನಾಗಮಂಡಲ, ಬ್ರಹ್ಮ ಮಂಡಲ

೫. ವೈದಿಕ / ಸಂಸ್ಕೃತ ಮೂಲದ ಅನಂತ ವೃತ, ಸರ್ಪಸಂಸ್ಕಾರ, ತಂಬಿಲ, ನಾಗದರ್ಶನ, ಆಶ್ಲೇಷಬಲಿ

ಬಾಕುಡ'ರು ತಮ್ಮದೇ ಆದ ನಾಗ ಸನ್ನಿಧಿಯಲ್ಲಿ ಸರ್ಪಂಕೋಲ ಮಾಡುತ್ತಾರೆ. ಇವುಗಳೆಲ್ಲದ ಆಧಾರದಲ್ಲಿ ವಿವಿಧ ಸಮುದಾಯಗಳು ಆರಾಧಿಸಿಕೊಂಡು ಬರುತ್ತಿರುವ ನಾಗಾರಾಧನೆಯನ್ನು ಈ ರೀತಿ ವಿಭಾಗಿಸಲ್ಪಡಲಾಗಿದೆ. ವೈದಿಕೇತ್ತರ ನಾಗಾರಾಧನೆ ಮತ್ತು ವೈದಿಕ ನಾಗಾರಾಧನೆ. **ವೈದಿಕೇತ್ತರ ನಾಗಾರಾಧನೆಯಾಗಿ:** ಅ) ಬಾಕುಡರ ಸರ್ಪಂಕೋಲ ಆ) ಪಾಣಾರರ ಪಾಣಾರಾಟ ಇ) ಮೇರರ ಕಾಡ್ಯನಾಟ್ಯ (ಕಾಳಿಂಗ ಸರ್ಪರಾಧನೆ) ಈ) ಮುಗೇರರ 'ಮುಗ್ಗರ್ತಿ ಕೋಲ' ಉ) ಕೊರಗರ ನಾಗಪೂಜೆ ಊ) ಮುಂಡಾಲರ ನಾಗಪೂಜೆ **ವೈದಿಕ ನಾಗಾರಾಧನೆ:** ನಾಗಪತ್ರಿಷ್ಟೆ, ನಾಗದರ್ಶನ, ಸರ್ಪಸಂಸ್ಕಾರ, ಆಶ್ಲೇಷ ಬಲಿ, ಡಕ್ಕೆ ಬಲಿ, ನಾಗಮಂಡಲ, ಬ್ರಹ್ಮಮಂಡಲ.

**ಮರಾಟಿ ಸಮುದಾಯಗಳ ನಾಗ ಸಂಬಂಧಿತ ನಂಬಿಕೆಗಳು:**

ನಾಗಸಂಬಂಧಿಯಾದ ನಂಬಿಕೆ ನಡವಳಿಕೆಗಳು ಇಲ್ಲಿನ ಮರಾಟಿಗರ ಜನಜೀವನದಲ್ಲಿ ಅತ್ಯಂತ ಸಹಜವಾಗಿ ಮಿಳಿತವಾಗಿವೆ. ನಾಗರಹಾವಿಗೆ ಒಂದು ಸಾವಿರವರ್ಷ ಆಯುಷದೆಯೆಂದೂ, ಅದಕ್ಕೆ ಅತೀಂದ್ರಿಯ ಜ್ಞಾನ ಇರುವುದೆಂದೂ ಪ್ರತೀತಿ. ಏಳೂ ಕನ್ನಡಿ ಹಾವುಗಳನ್ನು, ಕಬಳಿಸಿ, ಹಾರುತ್ತ ಬಾಲ ಕರಗಿ ಕ್ರಮೇಣ ರೆಕ್ಕೆ, ಹುಟ್ಟಿ, 'ಕುತ್ತೊಡಿ' ಎನಿಸಿ ಹಾರುತ್ತದೆಂದೂ ಅದರ ನೆರಳು ಸೋಂಕಿದವರಿಗೆ ಪಕ್ಷವಾತವೂ ಅದರ ಬಾಯಿಂದ ಜಗುಳದ ಜೊಲ್ಲು ನೊರೆಯನ್ನು ಮೆಟ್ಟಿದವರಿಗೆ 'ಕಾಲೊತ್ತು' ಎಂಬ ಪೀಡೆಯೂ ಉಂಟಾಗತ್ತದೆನ್ನುವುದು ಜನಪದರ ನಂಬಿಕೆ. ನಾಗರಹಾವನ್ನೋ ಅದರ ಮೊಟ್ಟೆ, ವಾಸಸ್ಥಳ, ಬೀದಿ ಇತ್ಯಾದಿಗಳನ್ನು ಪೂತಿಸಿದವರಿಗೆ ದೃಷ್ಟಿದೋಷ, ಕುಷ್ಟರೋಗ, ಸಂತಾನಕ್ಷಯಾದಿ ದೋಷ ತಟ್ಟುವುದೆಂಬ ನಂಬಿಕೆಯಿದೆ.[೪೮] 'ಸರ್ಪಮತ್ಸರ' ಎಂಬುದು ಪ್ರಸಿದ್ಧವೇ ಆಗಿದೆ. ಸಾಮಾನ್ಯವಾಗಿ ತಿಳಿದು ತಿಳಿದೂ ಯಾರೂ ನಾಗರಹಾವನ್ನು ಹಿಂಸಿಸುವುದಿಲ್ಲ. ಅದರ ಸಾನ್ನಿಧ್ಯ ಇರುವ ಸ್ಥಳದಲ್ಲಿ ಅಶುದ್ಧಿ ಮಾಡಲು ಅಂಜುತ್ತಾರೆ. ಅಶುದ್ಧಿಯಾದರೆ ಸರ್ಪ ಕಾಣಿಸಿಕೊಳ್ಳುವುದೆನ್ನುತ್ತಾರೆ. ನಾಗ ಪಾವಿತ್ರ್ಯದ ಸಂಕೇತವೆನಿಸಿದೆ.

ಸರ್ಪವೊಂದು ಸತ್ತುದನ್ನು ಕಂಡರೆ, ಅದನ್ನು ಸಂಸ್ಕಾರ ಮಾಡದೆ ಹೋಗಬಾರದೆಂದು ನಂಬಿಕೆ. ಸತ್ತ ಹಾವಿನ ಬಾಯಲ್ಲಿ ನಾಣ್ಯವನ್ನು ಇಟ್ಟು ಬಿಳಿಬಟ್ಟೆ ಹೊದೆಯಿಸಿ ದಹನ ಸಂಸ್ಕಾರ ನಡೆಯಿಸುತ್ತಾರೆ. ಆ ಬಳಿಕ ವ್ರತಸ್ಥರಾಗಿ ಉತ್ತರಕ್ರಿಯೆ ಜರಗಿಸಿ ಬ್ರಾಹ್ಮಣ ಸಂತರ್ಪಣೆ ನಡೆಯಿಸುವ ರೂಢಿಯಿದೆ. ನಾಗನಿಗೆ ಅಪಚಾರವಾಗಿದೆಯೆಂದೂ, ಆ ಬಗ್ಗೆ ಸೂಕ್ತವಾಗಿ ನಡೆದುಕೊಳ್ಳತಕ್ಕದ್ದೆಂದೂ

ಸೂಚನೆಯಾಗಿ (ಸುಪ್ತಮನಸ್ಸು–ಕನಸು –ಕಾಮ–ನಾಗ ಇವುಗಳಿಗೆ ಪರಸ್ಪರ ಸಂಬಂಧವಿದೆಯೆಂಬುದು ಮನಃಶಾಸ್ತ್ರಜ್ಞರ ಮತ) ಅಥವಾ ವಾಸ್ತವಿಕವಾಗಿ ನಾಗದರ್ಶನ, ಬಾವಿಯ ನೀರು ಹಳದಿಯಾಗುವುದು, ಮೈಮೇಲೆ ಬಿಳಿಯ ಕಲೆ ಬೀಳುವಿಕೆ, ಮರ, ಗಿಡ, ತರಕಾರಿಗಳಲ್ಲಿ ನಾಗನ ಆಕೃತಿ ಕಾಣಿಸಿಕೊಳ್ಳುವುದು ಇತ್ಯಾದಿ ಸಂಭವಿಸುವುದುಂಟೆಂದು ನಂಬಲಾಗಿದೆ. ಪರಿಹಾರವಾಗಿ ನಾಗಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವುದು ಸಾಮಾನ್ಯ. ನಾಗನ ಪ್ರತಿಷ್ಠೆ, ಆಶ್ಲೇಷಬಲಿ, ನಾಗದರ್ಶನ, ದಕ್ಕೆಬಲಿ, ನಾಗಮಂಡಲ, ತಂಬಿಲ ಇತ್ಯಾದಿಗಳಿಂದ ನಾಗನನ್ನು ಪ್ರಸನ್ನೀಕರಿಸುತ್ತಾರೆ.

ಅಧ್ಯಯನಕ್ಕೊಳಪಡಿಸಿರುವ ಮರಾಟಿ ಸಮುದಾಯಗಳ ನಾಗ ಬ್ರಹ್ಮಸ್ಥಾನ, ನಾಗನ ಆರೂಡ ಅಥವಾ 'ಆಲಡೆ' ಅಥವಾ 'ಬ್ರಹ್ಮಸ್ಥಾನ' ಅಥವಾ 'ಚಿತ್ತೇರಿ' ಎಂದು ಕರೆಯಲ್ಪಡುವ ವಿಶಿಷ್ಟ ಆರಾಧನಾ ಸ್ಥಳಗಳಲ್ಲಿ ಮುಖ್ಯವಾಗಿ ನಾಗ, ಬ್ರಹ್ಮ, ನಂದಿ (ನಂದಿಗೋಣ) ರಕ್ತೇಶ್ವರಿ ಹಾಗೂ ಕ್ಷೇತ್ರಪಾಲ ಎಂಬ ಶಕ್ತಿಗಳನ್ನು ಸಮಷ್ಟಿಯಾಗಿ ಪೂಜಿಸುವ ಸಂಪ್ರದಾಯವಿದೆ. (ನಂದಿಗೋಣನನ್ನು ಮೈಸಂದಾಯನೆಂದೂ, ರಕ್ತೇಶ್ವರಿಯನ್ನು ಲೆಕ್ಕೇರಿಸಿ ಎಂದೂ, ಕ್ಷೇತ್ರಪಾಲನನ್ನು ಗುಳಿಗನೆಂದೂ ಹೇಳುವುದುಂಟು) ಇವಲ್ಲದೆ ಬೇರೆಯೂ ಕೆಲವು ದೈವಗಳು ಆಲಡೆಯ ಸಂಕೀರ್ಣದಲ್ಲಿರಬಹುದು. ಆದರೆ ನಾಗನ ಉಪಸ್ಥಿತಿಯಂತೂ ಅನಿವಾರ್ಯ. ಗುಳಿಗದೈವದ ಬನದಲ್ಲೂ ನಾಗನಿಗೆ ಎಡೆಯಿದೆ. ಗುಳಿಗನ ವಾಹನವೂ ನಾಗ ಎನ್ನಲಾಗಿದೆ. ಅಷ್ಟನಾಗರಾಜರಲ್ಲಿ ಒಬ್ಬನ ಹೆಸರು 'ಕುಳಿಕ'[೫೧] ಎಂದಾಗಿದೆ.

ಆಲಡೆ ಹಾಗೂ ನಾಗಾಲಯಗಳು ಹಿಂದೆ ವನಪ್ರದೇಶದಲ್ಲಿದ್ದ ಪೂಜಾಸ್ಥಾನಗಳೆನ್ನಬಹುದು. ನಾಗನಿಗಂತೂ ಸಸ್ಯಶ್ಯಾಮಲವಾದ ತಂಪಾದ ತಾಣವೇ ಇಷ್ಟಕರ. ತುಳುನಾಡಿನ ನಾಗಸಂಬಂಧಿ ದೇಗುಲಗಳು ಇರುವ ಭೂಸ್ಥಿತಿಯನ್ನು ಗಮನಿಸಿದರೆ, ಸುತ್ತಲಿನ ಸ್ಥಳಕ್ಕಿಂತ ತಗ್ಗಿನ ತಂಪು ತಾವಿನಲ್ಲೆ ಆ ದೇಗುಲಗಳು ರೂಪುಗೊಂಡುದು ತಿಳಿದುಬರುತ್ತದೆ. (ಉದಾ: ಸುಬ್ರಹ್ಮಣ್ಯ, ಕುಡುಪು, ಮಂಜೇಶ್ವರ) ಒಂದು ಕಾಲದಲ್ಲಿ ಈ ದೇವಳಗಳಿದ್ದ ಸ್ಥಾನದಲ್ಲಿ ಮರಗಿಡಬಳ್ಳಿಗಳಿಂದ ನಿಬಿಡವಾದ ನಾಗವನ ಅಥವಾ ಹಿರಿಯ ಹುತ್ತಗಳು ಇದ್ದಿರಬಹುದು. ಈಗಲೂ ಕೆಲವು ದೇವಸ್ಥಾನಗಳ ಗರ್ಭಗುಡಿಯೊಳಗೆ ಬರಿಯ ಹುತ್ತ ಮಾತ್ರವೇ ಇದ್ದು, ಅದು ನಾಗದೇವತೆಯನ್ನು ಪ್ರತಿನಿಧಿಕರಿಸುವುದನ್ನು ಕಾಣಬಹುದು. ಸುಬ್ರಹ್ಮಣ್ಯದ ಮೂಲಸ್ಥಾನದಲ್ಲಿ ಹುತ್ತವೇ ಇದ್ದು, ಅದರ ಮೃತ್ತಿಕೆಯನ್ನೇ ಪ್ರಸಾದವಾಗಿ ಕೊಡುವ ಸಂಪ್ರದಾಯವಿದೆ. ಬಳ್ಳಮಂಜ ಮೊದಲಾದೆಡೆಯಲ್ಲೂ ಇದೇ ರೀತಿಯ ಹುತ್ತವಿದೆ. ಬ್ರಹ್ಮಲಿಂಗೇಶ್ವರನನ್ನು ಹುತ್ತದ ರೂಪದಲ್ಲಿ ಆರಾಧಿಸುವುದುಂಟು. ಕುಂದಾಪುರ ಕಡೆಯ ಕೆಲವು ಮುಖ್ಯ ಮನೆತನದ ಮನೆಗಳ ಪಕ್ಕದಲ್ಲಿ 'ಸ್ವಾಮಿಮನೆ' ಎಂದು ಕರೆಯಲ್ಪಡುವ ಚಿಕ್ಕಗುಡಿಗಳಲ್ಲಿ ದೊಡ್ಡ ಹುತ್ತಗಳೇ ಬೆಳೆದುನಿಂತಿರುತ್ತವೆ. ಹುತ್ತದ ಆರಾಧನೆಯು ಭೂಮಿಯ ಅಥವಾ ಮಾತೃದೇವತೆಯ ಆರಾಧನೆಯ ಒಂದು ರೂಪವೂ ಆಗಬಲ್ಲುದು. ಹುತ್ತದ ಅಥವಾ ಭೂಮಿಯ ಮಗುವಾಗಿ ನಾಗನಿಗೆ ಪೂಜೆ.

ದಕ್ಷಿಣಕನ್ನಡದ ಕೆಲವು ಶಕ್ತಿ ಕ್ಷೇತ್ರಗಳಲ್ಲಿ ನಾಗ ಮತ್ತು ದುರ್ಗಾ ಅಭೇದ್ಯವಾಗಿ ಆರಾಧನೆ ಹೊಂದುವ ಕುತೂಹಲಕರ ವಿಚಾರವನ್ನು ಗಮನಿಸಬಹುದು. ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬಸರೂರಿನ ದುರ್ಗಾಲಯ, ನೀಲಾವರದ ದುರ್ಗಾಭಗವತೀ ದೇವಾಲಯ (ಇಲ್ಲಿ ದೊಡ್ಡ ಬನ ಇದೆ) ಮಂದರ್ತಿ ಕ್ಷೇತ್ರ ಇತ್ಯಾದಿ ಕಡೆಗಳಲ್ಲಿ ಈ ಸಾಮರಸ್ಯವನ್ನು ಕಾಣಬಹುದು. ಶಾಂತಾದುರ್ಗ ಎಂಬ ಹೆಸರಲ್ಲಿ (ಗೋವಾದಲ್ಲಿ 'ಸಾಂತೇರಿ' ಎನ್ನುತ್ತಾರೆ) ಹುತ್ತವನ್ನು ಪೂಜಿಸಲಾಗುತ್ತದೆ. 'ನಾಗಬ್ರಹ್ಮಲಿಂಗೇಶ್ವರ' ಎಂಬುದರಲ್ಲಿ ನಾಗ, ಬ್ರಹ್ಮ ಮತ್ತು ಶಿವ ಎಂಬ ಮೂರು ಶಕ್ತಿಗಳ ಬೆಸುಗೆಯನ್ನು ಕಾಣಬಹುದು. ಹೆಬ್ರಿಯ ಒಂದು ಬ್ರಹ್ಮಸ್ಥಾನದಲ್ಲಿ ಗಣೇಶನೂ ಇದ್ದಾನೆ. ಒಟ್ಟಿನಲ್ಲಿ ಎಲ್ಲ ದೇವತೆಗಳೊಂದಿಗೂ ಮತಪ್ರಸ್ಥಾನಗಳೊಂದಿಗೂ ನಾಗನಿಗೆ ಹಿತಸಂಬಂಧವಿದೆಯೆಂಬುದನ್ನು ಕಂಡುಕೊಳ್ಳಬಹುದು.

ಉಡುಪಿ ಜಿಲ್ಲೆಯ ಕಾಳಾವರ ಎಂಬ ಪ್ರಸಿದ್ಧ ನಾಗಕ್ಷೇತ್ರದಲ್ಲಿ ಷಷ್ಠಿ ಹಬ್ಬದ (ಸಾಮಾನ್ಯವಾಗಿ ಷಷ್ಠಿಯೆಂದು ಎಲ್ಲ ನಾಗಕ್ಷೇತ್ರಗಳಲ್ಲೂ ಉತ್ಸವ ಜರುಗುತ್ತದೆ) ಮರುದಿನ ಬೆಳಗ್ಗೆ ನಾಗಮಂಡಲ ನಡೆಯುವುದು ವಾಡಿಕೆ. ಈ ಕ್ಷೇತ್ರದಲ್ಲಿ ಸುಬ್ರಹ್ಮಣ್ಯ ಕಾಳಂಗಸರ್ಪದ ರೂಪದಲ್ಲಿ ಹಿಂದೆ ಮೈದೋರಿದ್ದನಂತೆ. ಆ ಸರ್ಪ ಹರಿದು ಬಂದಿತೆಂದು ಹೇಳಲಾಗುವ ಅಂಕುಡೊಂಕಾದ ದಾರಿಯಲ್ಲಿ ತೋಡಿದರೆ ನೀರು ಬಹಳ ಮೇಲೆಯೇ ಸಿಗುತ್ತದಂತೆ (ನಾಗನಿಗೂ ನೀರಿಗೂ ಬಲು ನಂಟು. ಭೂಮಿಯ ಅಡಿಯ ನೀರಿನ ನಾಗಸಂಚಾರದ ಹಾದಿಯಲ್ಲಿ 'ನಾಗಬೀದಿ' ಎನ್ನುತ್ತಾರೆ. ಹುತ್ತ ಇದ್ದಲ್ಲಿ ನೀರಿನ ಸಾನಿಧ್ಯ ಇದೆ ಎಂದು ಊಹಿಸುತ್ತಾರೆ). ಇದನ್ನು 'ಕಾಳಂಗತೀರ್ಥ' ಎನ್ನುತ್ತಾರೆ. ಈ ಕ್ಷೇತ್ರದ ಕೆರೆಯಲ್ಲಿ ಮಿಂದು ಉರುಳುತ್ತಾ ದೇವಸ್ಥಾನಕ್ಕೆ ಪ್ರದಕ್ಷಿಣೆ ಬರುವ 'ಉರುಳು ಸೇವೆ'ಯನ್ನು ಕೆಲವರು ಕೈಕೊಳ್ಳುತ್ತಾರೆ. ಮಣ್ಣಿನ ಐದು ಹೆಡೆಗಳ ಆಕಾರಗಳಿರುವ ಕಲಶದಲ್ಲಿ ಅಕ್ಕಿ, ಕಾಯಿ, ಹೂ ಹಣ್ಣುಗಳ ಹರಕೆ ಹೊರುವ ಪರಿಪಾಠ ಈ ಕ್ಷೇತ್ರದಲ್ಲಿದೆ. ಸಂತಾನಪ್ರಾಪ್ತಿ ಹಾಗೂ ಕುಷ್ಟರೋಗಾದಿ ಚರ್ಮರೋಗಗಳ ನಿವಾರಣೆಯ ಉದ್ದೇಶದಿಂದ ಮಡೆಸ್ಥಾನ ಭಕ್ತಾದಿಗಳು ನಡೆಸುವರು.

ಉಲ್ಲೇಖಗಳು :


೧. ಪಿ.ಕಮಲಾಕ್ಷ : ದ.ಕ. ಜಿಲ್ಲೆಯ "ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ", ಕನ್ನಡ ಪುಸ್ತಕ ಪ್ರಾಧಿಕಾರ, ದ.ಕ. ಜಿಲ್ಲೆ ಮಂಗಳೂರು, ೧೯೯೪

೨. ಡಾ. ಪುರುಷೋತ್ತಮ ಬಿಳಿಮಲೆ : "ಕರಾವಳಿ ಜಾನಪದ", ಪ್ರಸಾರಾಂಗ ಮಂಗಳಗಂಗೋತ್ರಿ ೧೯೯೦

೩. ಡಾ.ಹಿ.ಚಿ. ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೬

೪. ಡಾ.ಹೆಚ್.ಜೆ. ಲಕ್ಕಪ್ಪ ಗೌಡ : 'ಕರ್ನಾಟಕದ ಬುಡಕಟ್ಟುಗಳು', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ೨೦೦೦

೫. ಡಾ.ಕೆ.ಎಂ. ಮೇತ್ರಿ : "ಬುಡಕಟ್ಟು ಕುಲಕಸುಬುಗಳು" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೨

೬. ಡಾ.ಹಿ.ಚಿ. ಬೋರಲಿಂಗಯ್ಯ ಮತ್ತು ಡಾ.ಎ.ಎಸ್. ಪ್ರಭಾಕರ (ಸಂ) : "ಕರ್ನಾಟಕ ಬುಡಕಟ್ಟು ಸಚಿತ್ರ ಕೋಶ", ಪ್ರಸಾರಾಂಗ ಕ.ವಿ. ಹಂಪಿ ೨೦೧೩

೭. ಗುಣಪಾಲ ಶೆಟ್ಟಿ : 'ಮೌನ ಮಾತಾದಾಗ', ಸಮಗ್ರ ಗ್ರಾಮೀಣ ಆಶ್ರಮ, ಪೆರ್ನಾಲ್ ಉಡುಪಿ ೨೦೧೨

೮. ಡಾ. ಇಂದಿರಾ ಹೆಗ್ಗಡೆ : "ತುಳುನಾಡಿನ ಕೊರಗರು", ಸಾಮಾಜಿಕ, ಆರ್ಥಿಕ ಸ್ಥಿತಿಗತಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಬುಡಕಟ್ಟು ಅಧ್ಯಯನ ಸಂಪುಟ ೨೦೦೭

೯. ಡಾ. ಅರುಣ ಕುಮಾರ್ ಎಸ್.ಆರ್. : 'ಸೀಮೆ', ಜಾನಪದ ಸಂಘ, ವಿಜಯ ಕಾಲೇಜು ಮುಲ್ಕಿ (ದಕ) ೧೯೯೬

೧೦. ಗಾಯತ್ರಿ ನಾವಡ : 'ವಿರಚನೆ', ಎನ್.ಆರ್.ಎ.ಎಂ.ಎಚ್. ಪ್ರಕಾಶನ ಕೋಟೇಶ್ವರ, ಕುಂದಾಪುರ ೧೯೯೭

೧೧. ಡಾ. ನಾವಡ ಎ.ವಿ. : "ತುಳು ಪೊಲಿ" ಶೋಧನಾ ಪ್ರಕಾಶನ, ಮಂಗಳೂರು ೨೦೧೩